ಓ.ಎಸ್. ನಂಃ 140/2020

ಡಿ.ಡಬ್ಲ್ಯೂಃ 1

**ದಿನಾಂಕ 23.06.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿಯ ಪರ ಃ ಶ್ರೀ ಬಿ.ಕೆ.ಪಿ. ವಕೀಲರಿಂದಃ**

1. ದಾವಾ ಆಸ್ತಿಯು ಮೂಲತಹಃ ವಾದಿಯ ತಂದೆಯಾದ ಹುಚ್ಚೇಗೌಡರಿಗೆ ಸೇರಿದ ಜಮೀನು ಎಂದರೆ ಸರಿಯಲ್ಲ. ತಮ್ಮ ತಂದೆಯ ಮರಣದ ನಂತರದಲ್ಲಿ ದಾವಾ ಆಸ್ತಿಯನ್ನು ವಾದಿ ತಮ್ಮ ಹೆಸರಿಗೆ ಖಾತೆ ವರ್ಗಾವಣೆ ಮಾಡಿಸಿಕೊಂಡು ದಾವಾ ಆಸ್ತಿಯನ್ನು ಉಳುಮೆ ಮಾಡುತ್ತಿದ್ದಾರೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ದಾವಾ ಆಸ್ತಿಯ ಪೈಕಿ 20 ಗುಂಟೆ ಜಮೀನನ್ನು ನನ್ನ ಅಣ್ಣನಾದ ರಾಮನಾಯಕ ರವರು ಉಳುಮೆ ಮಾಡುತ್ತಿದ್ದಾರೆ ಎಂದು ಸಾಕ್ಷಿಯು ನುಡಿದಿರುತ್ತಾರೆ. ವಾದಿಯು ದಾವಾ ಆಸ್ತಿಯನ್ನು ಅಡಮಾನ ಇಟ್ಟು ಸಾಲವನ್ನು ಪಡೆದಿದ್ದು, ಬ್ಯಾಂಕಿಗೆ ವಾದಿಯು ದಾವಾ ಆಸ್ತಿಯ ಚೆಕ್ಕುಬಂಧಿಯನ್ನು ನೀಡಿರುತ್ತಾರೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ದಾವಾ ಆಸ್ತಿಯ ಪೈಕಿ 20 ಗುಂಟೆ ಜಮೀನಿನಲ್ಲಿ ನನ್ನ ಅಣ್ಣನಾದ ರಾಮನಾಯಕ ರವರು ಇದ್ದಾರೆ ಎಂದು ನುಡಿದಿರುತ್ತಾರೆ.

2. ನನ್ನ ತಾಯಿಯ ಹೆಸರು ನಿಂಗಮ್ಮ ಎಂದರೆ ಸರಿ. ನನ್ನ ತಾಯಿಯ ಮರಣದ ನಂತರ ಸರ್ವೇ ನಂಬರ್ 23/2 ರಲ್ಲಿ 18 ಗುಂಟೆ, 22/5 ರಲ್ಲಿ 1 ಎಕರೆ 1 ಗುಂಟೆ, 22/4 ರಲ್ಲಿ 7 ಗುಂಟೆ, 23/3 ರಲ್ಲಿ 20 ಗುಂಟೆಯಂತೆ ಒಟ್ಟು 2 ಎಕರೆ 6 ಗುಂಟೆ ಜಮೀನನ್ನು ನನ್ನ ಮತ್ತು ಸಹೋದರ ಸಹೋದರಿಯರ ಹೆಸರಿಗೆ ಪೌತಿ ಖಾತೆ ಮಾಡಲು ನಾವು ತಹಸೀಲ್ದಾರ್ ರಿಗೆ ಅರ್ಜಿಯನ್ನು ನೀಡಿದ್ದೇವು ಎಂದರೆ ಸರಿ. ಮೇಲೆ ಹೇಳಿದ ಆಸ್ತಿಗಳು ನನ್ನ ತಾಯಿಗೆ ಯಾವ ಮೂಲಗಳಿಂದ ಬಂದಿರುತ್ತದೆ ಎಂದು ನಾವು ತಹಸೀಲ್ದಾರ್ ರವರಿಗೆ ದಾಖಲೆಗಳನ್ನು ಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ.

3. ಮೇಲೆ ಹೇಳಿದ ಒಟ್ಟು 2 ಎಕರೆ 6 ಗುಂಟೆ ಜಮೀನಿನ ಪಹಣಿಗಳು ಪ್ರತ್ಯೇಕವಾಗಿ ನನ್ನ ಮತ್ತು ನನ್ನ ಸಹೋದರಿಯರ ಪ್ರತ್ಯೇಕ ಹೆಸರಿನಲ್ಲಿದ್ದ ಕಾರಣ ನಿಡಿ.1 ರ ವಿಭಾಗ ಪತ್ರ ಮಾಡಿಕೊಳ್ಳುವ ಪೂರ್ವದಲ್ಲಿ ನಾವು ಸರ್ವೇ ನಕಾಶೆಯನ್ನು ಮಾಡಿಸಿಕೊಂಡಿರುವುದಿಲ್ಲ. ವಾದಿಯೇ ದಾವಾ ಆಸ್ತಿಯ ಸ್ವಾಧೀನದಲ್ಲಿದ್ದರು ಸಹ

ದಾವಾ ಆಸ್ತಿಯ ಪೈಕಿ 20 ಗುಂಟೆ ಜಮೀನಿನ ಸ್ವಾಧೀನದಲ್ಲಿ ನನ್ನ ಅಣ್ಣನಾದ ರಾಮನಾಯಕ ಇದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ನಿಡಿ.1 ರ 4 ನೇ ಪುಟ್ಟದಲ್ಲಿ ನಮೂದಿಸಿರುವ ಸರ್ವೇ ನಂಬರ್ 23/16 ರ 20 ಗುಂಟೆ ಜಮೀನು ನಿಡಿ.4 ರಲ್ಲಿ ನಮೂದಿಸಿರುವ ಚೆಕ್ಕುಬಂಧಿಯ ಒಳಗಡೆ ಇರುತ್ತದೆ ಎಂದು ತೋರಿಸಲು ನಾವು ಪ್ರತ್ಯೇಕ ಸರ್ವೇ ನಕಾಶೆಯನ್ನು ಮಾಡಿರುವುದಿಲ್ಲ. ಸರ್ವೇ ನಂಬರ್ 23/3 ರ 20 ಗಂಟೆ ಜಮೀನನ್ನು ಸರ್ವೇ ನಂಬರ್ 23/16 ಎಂದು ನಾವು ಪೋಡು ಬದಲಾವಣೆ ಮಾಡಿಸಿರುವುದಿಲ್ಲ ಬದಲಾಗಿ ಪೋಡು ಮುಕ್ತ ಗ್ರಾಮ ಅಭಿಯಾನದಲ್ಲಿ ಸರ್ಕಾರದವರೇ ಸದರಿ ಸರ್ವೇ ನಂಬರಿನ ಪೋಡು ಬದಲಾವಣೆ ಮಾಡಿಸಿರುತ್ತಾರೆ ಎಂದು ಸಾಕ್ಷಿಯು ನುಡಿದಿರುತ್ತಾರೆ. ಮೂಲ ಸರ್ವೇ ನಂಬರ್ 23/3 ರ ಪೋಡು ಬದಲಾವಣೆ ಆದರೆ ನಮಗೆ ತೊಂದರೆ ಆಗುತ್ತದೆ ಎಂದು ನಾವು ಸರ್ವೇ ಇಲಾಖೆಗೆ ಯಾವುದೇ ಅರ್ಜಿಯನ್ನು ನೀಡಿರುವುದಿಲ್ಲ.

5. ಮೂಲ ಸರ್ವೇ ನಂಬರ್ 23/3 ರ ಪೋಡು ಬದಲಾವಣೆ ಆಗಿ ಸರ್ವೇ ನಂಬರ್ 23/16 ಆಗಿರುವುದನ್ನು ಪ್ರಶ್ನಿಸಿ ನನ್ನ ಸಹೋದರನಾದ ರಾಮನಾಯಕರವರು ಡಿ.ಡಿ.ಎಲ್.ಆರ್ ರವರಿಗೆ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಪೋಡು ಬದಲಾವಣೆ ಆದ ಕಾರಣ ಬದಲಾದ ಸರ್ವೇ ನಂಬರಿನ ಪೋಡಿಗೂ ಮತ್ತು ಅನುಭೋಗಕ್ಕೂ ವ್ಯತ್ಯಾಸವಾದ ಕಾರಣ ಸದರಿ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ ಎಂದು ಸಾಕ್ಷಿಯು ಸ್ವತಃ ನುಡಿದಿರುತ್ತಾರೆ.

6. ನನ್ನ ಸಹೋದರ ಮೇಲ್ಮನವಿ ಸಲ್ಲಿಸಿದ ನಂತರ ಭೂ-ಮಾಪನಾ ಇಲಾಖೆಯವರು ನಮಗೂ ಮತ್ತು ವಾದಿಗೂ ಹಾಗೂ ಇತರರಿಗೂ ನೋಟಿಸನ್ನು ನೀಡಿದ ನಂತರದಲ್ಲಿಯೇ ಸರ್ವೇ ಕಾರ್ಯಕ್ಕೆ ಬಂದಿದ್ದರು. ಆ ರೀತಿ ಅಳತೆ ಕಾರ್ಯ ಮಾಡಿದ ನಂತರ ವಾದಿಯೇ ದಾವಾ ಆಸ್ತಿಯ ಸ್ವಾಧೀನದಲ್ಲಿದ್ದಾರೆ ಎಂದು ಭೂ-ಮಾಪನಾ ಇಲಾಖೆಯವರು ಹೇಳಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ದಕ್ಷಿಣ ದಿಕ್ಕಿನಲ್ಲಿರುವ ಹಳೆ ಸರ್ವೇ ನಂಬರ್ 23/3 ರ ಸ್ವಾಧೀನದಲ್ಲಿದ್ದೇವೆ ಎಂದು ಭೂ-ಮಾಪನಾ ಇಲಾಖೆಯವರು ಹೇಳಿರುತ್ತಾರೆ ಎಂದರೆ ಸರಿಯಲ್ಲ. ಭೂ-ಮಾಪನಾ ಇಲಾಖೆಯವರು ಸದರಿ ವಿಷಯ ಹೇಳಿದ ನಂತರ ನಮ್ಮ 20 ಗುಂಟೆ ಜಮೀನು ದಾವಾ ಆಸ್ತಿಯ ಒಳಗಡೆ ಇರುತ್ತದೆ ಎಂದು ನಾವು ಭೂ-ಮಾಪನಾ

ಇಲಾಖೆಯವರೊಂದಿಗೆ ತಕರಾರು ಮಾಡಿದ ಕಾರಣ ಅವರು ವಾಪಸ್ಸು ಹೋಗಿರುತ್ತಾರೆ ಎಂದರೆ ಸರಿಯಲ್ಲ.

**ವಾದಿ ಪರ ವಕೀಲರು ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**